ಆಧೀನ ಮಿತ್ರರ ನಕಲು ಕ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬಲು ಹಾಲಿ ಇರುವ ನಿರ್ಬಂಧವನ್ನು ಸಡಿಲಿಸುವ ಬಗ್ಗೆ.

**ಓದಲಾಗಿದೆ :**
1] ದಿನಾಂಕ:31-01-95ರ ಅಧಿಕೃತ ಜ್ಞಾಪನ ಸಂಖ್ಯೆ:ಇಡಿ 450 ಎಸ್‌ಇಪಿ 1992..
2] ದಿನಾಂಕ: 02-02-2000ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99ರಲ್ಲಿ ಒಳಗೊಂಡ ನಿಯಮಗಳು.
3] ದಿನಾಂಕ: 03-02-2001ರ ಅಧಿಸೂಚನೆ ಸಂಖ್ಯೆ: ಇಡಿ 65 ವಿವಿಧ 2000.
4] ದಿನಾಂಕ: 07-08-2002ರ ಸುತ್ತೋಲೆ ಸಂಖ್ಯೆ: ಇಡಿ 137 ಎಸ್‌ಇಪಿ 2001.
5] ದಿನಾಂಕ: 11-09-2002ರ ಸುತ್ತೋಲೆ ಸಂಖ್ಯೆ: ಇಡಿ 137 ಎಸ್‌ಇಪಿ 2001.
6] ದಿನಾಂಕ: 13-11-2002ರ ಸುತ್ತೋಲೆ ಸಂಖೆಸ್ಯ: ಇಡಿ 137 ಎಸ್‌ಇಪಿ 2001.
7] ದಿನಾಂಕ: 17-01-2004ರ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2004.
8] ದಿನಾಂಕ: 05-07-2004ರ ಆದೇಶ ಸಂಖ್ಯೆ: ಎಫ್‌ಡಿ 02 ಬಿಇಎಂ 2003.
9] ದಿನಾಂಕ:28-10-96ರ ಸರ್ಕಾರಿ ಆದೇಶ ಸಂಖ್ಯೆ:ಇಡಿ155 ಎಸ್‌ಓಹೆಚ್ 95[1].
10]ದಿನಾಂಕ: 01-02-2006ರ ಸರ್ಕಾರಿ ಆದೇಶ ಸಂಖ್ಯೆ:ಇಡಿ 19 ಟಿಪಿಯು 2004.

**ಪ್ರಸ್ತಾವನೆ:**

01] ಮೇಲೆ ಕ್ರಮ ಸಂಖ್ಯೆ: [1]ರಲ್ಲಿ ಓದಲಾದ ದಿನಾಂಕ: 31-01-95ರ ಅಧಿಕೃತ ಜ್ಞಾಪನದನ್ವಯ ಅನುದಾನಿತ ಖಾಸಗಿ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಆಯಾಯ ಆಡಳಿತ ಮಂಡಳಿಗಳು ಮಾಡಿದ ನೇಮಕಾತಿಗಳ ಅನುಮೋದನೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ: [2]ರಲ್ಲಿ ಓದಲಾದ ದಿನಾಂಕ: 02-02-2000ರ ಅಧಿಸೂಚನೆಯನ್ವಯ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ನೇಮಕಾತಿ ಸಿಬ್ಬಂದಿ ಮಾದರಿ, ನೌಕರರ ಸೇವಾ ಷರತ್ತುಗಳು ಇತ್ಯಾದಿಯ ಕುರಿತು ನಿಯಮಗಳನ್ನು ರೂಪಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [3]ರಲ್ಲಿ ಓದಲಾದ ದಿನಾಂಕ: 03-02-2001ರ ಅಧಿಸೂಚನೆಯನ್ವಯ ದಿನಾಂಕ: 02-02-2000ರ ನಿಯಮಗಳಲ್ಲಿನ ಅನುಬಂಧಕ್ಕೆ ತಿದ್ದುಪಡಿ ತಂದು, ತ್ರಿಸದಸ್ಯ ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [4]ರಲ್ಲಿ ಓದಲಾದ ದಿನಾಂಕ: 07-08-2000ರ ಸುತ್ತೋಲೆಯನ್ವಯ, ಹೆಚ್ಚುವರಿ ಶಿಕ್ಷಕರಿಂದಾಗಿ ನೇಮಕಾತಿ ಅನುಮೋದನೆಗೆ ಇದ್ದ ನಿರ್ಬಂಧವನ್ನು ಸಡಿಲಿಸಿ, ದಿನಾಂಕ: 06-08-2004ರವರೆಗೆ ಉದ್ಭವವಾದಂತಹ [ಅನುದಾನಿತ] ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿತ್ತು. ಮೇಲೆ ಕ್ರಮ ಸಂಖ್ಯೆ: [5]ರಲ್ಲಿ ಓದಲಾದ ದಿನಾಂಕ: 11-09-2002ರ ಸುತ್ತೋಲೆಯನ್ವಯ, ನೇಮಕಾತಿಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರ ಆಯಾಯಾ ಜಿಲ್ಲೆಗಳ ಉಪ ನಿರ್ದೇಶಕರು ಆಗಿರುತ್ತಾರೆಂದು ಸ್ಪಷ್ಟಪಡಿಸಲಾಯಿತು. ಮೇಲೆ ಕ್ರಮ ಸಂಖ್ಯೆ: [6]ರಲ್ಲಿ ಓದಲಾದ ದಿನಾಂಕ: 13-11-2002ರ ಸುತ್ತೋಲೆಯನ್ವಯ, ದಿನಾಂಕ: 07-08-2002ರ ಸುತ್ತೋಲೆಯನ್ನು ಭಾಗಶ: ಮಾರ್ಪಡಿಸಿ, ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ಉಪ ನಿರ್ದೇಶಕರಾಗಿರುತ್ತಾರೆಂದು ಸ್ಪಷ್ಟೀಕರಿಸಲಾಗಿತ್ತು. ಆದರೆ, ನಂತರದ ಮೇಲೆ ಕ್ರಮ ಸಂಖ್ಯೆ: [7]ರಲ್ಲಿ ಓದಲಾದ ದಿನಾಂಕ: 17-01-2004ರ ಆದೇಶದನ್ವಯ ದಿನಾಂಕ: 31-01-95ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಮೂಲಕ ನೇಮಕಾತಿ ಅನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯಾಯೋಜಿಸಲಾಗಿದ್ದ ಅಧಿಕಾರವನ್ನು ಮತ್ತು ತತ್ಸಂಬಂಧ ಇತರೆ ಯಾವುದೇ ಪ್ರತ್ಯಾಯೋಜಿತ ಅಧಿಕಾರಗಳು ಚಾಲ್ತಿಯಲ್ಲಿದ್ದಾಗ್ಯೂ ಕೂಡ ಈ ಎಲ್ಲಾ ಪ್ರತ್ಯಾಯೋಜಿತ ಅಧಿಕಾರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ. ಮೇಲೆ ಕ್ರಮ ಸಂಖ್ಯೆ: [8]ರಲ್ಲಿ ಓದಲಾದ

ದಿನಾಂಕ: 05-07-2004ರ ಆದೇಶದನ್ವಯ, ಆರ್ಥಿಕ ಮಿತವ್ಯಯ ಇರುವುದರಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬತಕ್ಕದ್ದಲ್ಲವೆಂದು ನಿರ್ಬಂಧ ವಿಧಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ: [9]ರಲ್ಲಿ ಓದಲಾದ ದಿನಾಂಕ: 28-10-1996ರ ಸರ್ಕಾರಿ ಆದೇಶದನ್ವಯ, ಅನುದಾನಿತ ಖಾಸಗಿ ಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ವಿಭಾಗ/ವಿಷಯಗಳನ್ನು ಅದರಲ್ಲಿ ಉಲ್ಲೇಖಿಸಲಾದ ಆಯವ್ಯಯದ ಶೇಕಡಾ 3ರ ಉಳಿತಾಯದಲ್ಲಿ ಅನುದಾನಕ್ಕೆ ಒಳಪಡಿಸಲು ಅಸ್ಪದ ಕಲ್ಪಿಸಲಾಗಿದ್ದು, ಮೇಲೆ ಕ್ರಮ ಸಂಖ್ಯೆ: [10]ರಲ್ಲಿ ಓದಲಾದ ದಿನಾಂಕ: 01-02-2006ರ ಆದೇಶದನ್ವಯ, ದಿನಾಂಕ: 28-10-96ರ ಆ ಆದೇಶವನ್ನು ರದ್ದುಗೊಳಿಸಲಾಗಿದೆ.

02] ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ನಿಷೇಧಿಸಿದ. ಹಿನ್ನೆಲೆಯಲ್ಲಿ, ಶಿಕ್ಷಕರಿಲ್ಲದೇ ಶಾಲೆಗಳ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವುದಾಗಿ ಹಲವಾರು ಸಂಘ ಸಂಸ್ಥೆ, ಆಡಳಿತ ಮಂಡಳಿ ಹಾಗೂ ಸಾರ್ವಜನಿಕರಿಂದ ಆ ನಿಷೇಧವನ್ನು ಸಡಿಲಿಸಲು ಕೋರಿಕೆಗಳು ಬಂದಿದ್ದು, ಅದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಡಿ 46 ಎಸ್‌ಇಪಿ 2006**

**ಬೆಂಗಳೂರು, ದಿನಾಂಕ : 12 ನೇ ಏಪ್ರಿಲ್ 2006.**

03] ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಉಂಟಾದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ 2,106 ಮತ್ತು ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿನ 282 [ಒಟ್ಟು 2,388] ಸಕ್ಷಮ ಪ್ರಾಧಿಕಾರದಿಂದ ಅನುದಾನಕ್ಕೆ ಒಳಪಡಿಸಲಾದ ಬೋಧಕ ಹುದ್ದೆಗಳನ್ನು ತುಂಬಲು ಈ ಕೆಳಕಂಡ ಷರತ್ತಿಗೊಳಪಟ್ಟು ಈ ಮೂಲಕ ಅನುಮತಿ ನೀಡಲಾಗಿದೆ.

(1) ಸಂಬಂಧಿಸಿದ ಅನುದಾನಿತ ಖಾಸಗಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾಗಿರತಕ್ಕದ್ದು. ಹಾಗೂ ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸಿರಬೇಕು.

(2) ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ ಮತ್ತು ನೊಂದಣಿ] ನಿಯಮಾವಳಿ, 1997ರ ಪ್ರಕಾರ ನೊಂದಾವಣಿಯಾಗಿರತಕ್ಕದ್ದು. ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999ರ ಪ್ರಕಾರ ಮಾನ್ಯತೆಯನ್ನು ಪಡೆದು, ಪ್ರಸಕ್ತ ಸಾಲಿಗೆ ನವೀಕರಣವಾಗಿರತಕ್ಕದ್ದು.

(3) ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳ [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದೀಕರಣ] ನಿಯಮಾವಳಿ, 1995ರ, ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999 ಮತ್ತು ಇತರೆ ಸಂಬಂಧಿತ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೇ, ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿರತಕ್ಕದ್ದು ಮತ್ತು ಮಕ್ಕಳಿಗೆ ಹಾನಿಕಾರಕವಾದ ಯಾವುದೇ ರೀತಿಯ ಅನಾರೋಗ್ಯಕರವಾದ ವಾತಾವರಣವನ್ನು

ಹೊಂದಿರಬಾರದು. ಮಕ್ಕಳ ಶೈಕ್ಷಣಿಕ ಚಟುವಟಿಕೆ ಉತ್ತಮ ಮಟ್ಟದಲ್ಲಿರಲು ಅಗತ್ಯವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(4) ಕ್ರಮ ಸಂಖ್ಯೆ: [3]ರ ಉದ್ದೇಶಕ್ಕಾಗಿ, <u>ಅನುಬಂಧ-1</u> ರಲ್ಲಿ ನಿಗದಿಪಡಿಸಿದಂತೆ, ಸಂಬಂಧಿಸಿದ ಪ್ರೌಢಶಾಲೆಯನ್ನು/ಪದವಿ ಪೂರ್ವ ಕಾಲೇಜನ್ನು ಮೌಲ್ಯಮಾಪನಕ್ಕೆ ಒಳಪಡಿಸತಕ್ಕದ್ದು. ಆ ಮೌಲ್ಯಮಾಪನದ ಪ್ರಕಾರ 60ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿದ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಪ್ರಸ್ತುತ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹರಾಗುವುದಿಲ್ಲ.

(5) ಕರ್ನಾಟಕ ಶಿಕ್ಷಣ ಸಂಸ್ಥೆಗಳ [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999ರ ಅಡಿಯಲ್ಲಿ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿ ರಚನೆಯನ್ವಯ ನೇಮಕಾತಿ ಮಾಡಿಕೊಂಡಿರಬೇಕು.

(6) ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಅನುಬಂಧ-1ರ ಕ್ರಮ ಸಂಖ್ಯೆ: [1]ರಲ್ಲಿ ಉಲ್ಲೇಖಿಸಿದಂತೆ ಹೊಂದಿರತಕ್ಕದ್ದು.

(7) ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ಅನುದಾನಕ್ಕೆ ಒಳಪಡಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾಗಿರತಕ್ಕದ್ದು.

(8) ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ನಿಧನ, ನಿವೃತ್ತಿ, ರಾಜೀನಾಮೆ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಖಾಲಿ ಆಗಿರತಕ್ಕದ್ದು.

(9) ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಶಿಕ್ಷಕರು/ಉಪನ್ಯಾಸಕರು ಪ್ರಚಲಿತ ನಿಯಮಗಳ/ಆದೇಶಗಳ ಪ್ರಕಾರ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

(10) ಈಗಾಗಲೇ ನೇಮಕವಾಗಿರುವ ಅಥವಾ ಮುಂದೆ ನೇಮಕವಾಗುವ ಶಿಕ್ಷಕರ/ಉಪನ್ಯಾಸಕರ ನೇಮಕಾತಿಯು ನಿಗದಿತ ಪ್ರಚಲಿತ ಸಿಬ್ಬಂದಿ ಮಾದರಿ ಮತ್ತು ನಿಯಮಗಳನ್ವಯ ಆಗಿರಬೇಕು/ಆಗಿರತಕ್ಕದ್ದು.

(11) ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿ ಮಾಡಿಕೊಂಡ ನೇಮಕಾತಿಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999, ಈ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿರತಕ್ಕದ್ದು. ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆಯಾಗದಿದ್ದಲ್ಲಿ ನಿಯಮಗಳಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಸದರಿ ನಿಯಮಗಳ ಅನುಬಂಧ-1ರನ್ವಯ, ಅದನ್ನು ಮೇಲೆ [3]ರಲ್ಲಿ ಓದಲಾದ ದಿನಾಂಕ: 03-02-2001ರ ಅಧಿಸೂಚನೆಯಂತೆ ತಿದ್ದುಪಡಿ ಮಾಡಿ ನಿಗದಿಪಡಿಸಿದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ, ಆ ಸಮಿತಿಯ ಅನುಮೋದನೆಯನ್ನು ಪಡೆದು ತದನಂತರ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು.

(12) ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಸಂಸ್ಥೆಗಳು ಈ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹತೆ ಪಡೆಯುವುದಿಲ್ಲ.

(13) ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ./ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ಶಿಕ್ಷಣದ ಪರೀಕ್ಷೆಯ ಸಾಮಾನ್ಯ ಫಲಿತಾಂಶವು ಅನುಬಂಧ–1ರ ಕ್ರಮ ಸಂಖ್ಯೆ: [3]ರಲ್ಲಿ ಉಲ್ಲೇಖಿಸಿದಂತೆ ಇರತಕ್ಕದ್ದು.

(14) ಕರ್ನಾಟಕ ಸಂಘಗಳ ನೊಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರಬೇಕು ಹಾಗೂ ಇಲಾಖೆಯ ಮಾಹಿತಿಗಾಗಿ ಪಿಟಿಆರ್ ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು [ಸಕ್ಷಮ ಪ್ರಾಧಿಕಾರಿಯಿಂದ ಧೃಢೀಕರಿಸಲ್ಪಟ್ಟಿರಬೇಕು] ಸಲ್ಲಿಸತಕ್ಕದ್ದು.

(15) ದಿನಾಂಕ: 01–02–2006ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 19 ಟಿಪಿಯು 2004ರಲ್ಲಿ ಹೆಚ್ಚುವರಿ ವಿಭಾಗ/ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವುದನ್ನು ರದ್ದುಪಡಿಸಿರುವ ಹೆಚ್ಚುವರಿ ವಿಭಾಗ/ವಿಷಯಗಳಿಂದ ಉದ್ಭವಿಸುವ ಖಾಲಿ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ.

(16) ಹೆಚ್ಚುವರಿ ಶಿಕ್ಷಕರ/ಉಪನ್ಯಾಸಕರ ಹುದ್ದೆ ಎಂದು ಗುರುತಿಸಿ ಹೆಚ್ಚುವರಿ ಶಿಕ್ಷಕರನ್ನು ಬೇರೆ ಶಾಲೆಗಳಿಗೆ ಸ್ಥಳಾಂತರಿಸಿದ ಖಾಲಿ ಹುದ್ದೆಗಳು ತಾನಾಗಿ ರದ್ದಾಗಿದ್ದು ಅವುಗಳನ್ನು ತುಂಬಲು ಅವಕಾಶವಿಲ್ಲ.

(17) ಹೆಚ್ಚುವರಿ ಶಿಕ್ಷಕರನ್ನು/ಉಪನ್ಯಾಸಕರನ್ನು ಸ್ಥಳಾಂತರಿಸಿ ಪುನರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳದಿದ್ದರೆ ಅಂತಹ ಖಾಲಿ ಹುದ್ದೆಗಳನ್ನು ಶಾಶ್ವತ ಅನುದಾನರಹಿತ ಎಂದು ಆದೇಶಿಸಿದ್ದು, ಅವುಗಳನ್ನು ತುಂಬಲು ಅವಕಾಶವಿಲ್ಲ.

(18) ಸ್ವಾಭಾವಿಕ ಬೆಳವಣಿಗೆ ಮತ್ತು ಹೆಚ್ಚುವರಿ ವಿಭಾಗ/ವಿಷಯದಂತಹ ಕಾರಣಗಳಿಂದ ಉದ್ಭವಿಸಿದ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ.

04] ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಹಾಗೂ ಅದರಂತೆ ಆದ ನೇಮಕಾತಿಗಳನ್ನು ಅನುದಾನ ಸಹಿತ ಅನುಮೋದಿಸುವ ಸಕ್ಷಮ ಪ್ರಾಧಿಕಾರ, ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯಾಯ ಆಯುಕ್ತರುಗಳು ಆಗಿರುತ್ತಾರೆ. ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಸದರಿ ಸಕ್ಷಮ ಪ್ರಾಧಿಕಾರ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಆಗಿರುತ್ತಾರೆ. ಈ ಅಧಿಕಾರವನ್ನು ಸದರಿ ಅಧಿಕಾರಿಗಳೇ ಸ್ವತ: ಚಲಾಯಿಸತಕ್ಕದ್ದು ಹಾಗೂ ಅದನ್ನು ಅವರು ಯಾವುದೇ ಇತರೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸತಕ್ಕದ್ದಲ್ಲ.

05] ಕಂಡಿಕೆ: 04ರಲ್ಲಿ ಉಲ್ಲೇಖಿಸಲಾದ ಸಕ್ಷಮ ಪ್ರಾಧಿಕಾರಗಳು ಅನುಬಂಧ–1 ಹಾಗೂ ಅನುಬಂಧ – 2ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ, ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದಂತೆ ವಿವರಗಳನ್ನು ಪಡೆದು, ಆಯಾಯ ನೇಮಕಾತಿಯನ್ನು ಅನುದಾನ ಸಹಿತ ಅನುಮೋದಿಸುವ ಬಗ್ಗೆ ಅರ್ಹತೆಯ ಮೇಲೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕದ್ದು.

06] ಆರ್ಥಿಕ ಇಲಾಖೆಯ ದಿನಾಂಕ: 24-02-2006ರ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 94 ವೆಚ್ಚ-8/2006ರ ಮೂಲಕ ನೀಡಿದ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/4
[ ಸಿದ್ಧಲಿಂಗಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.
12/4/06

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
5) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6) ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7) ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8) ಎಲ್ಲಾ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
9) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8.
11) ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ ( ಸಾಮಾನ್ಯ ).
12) ಉಪ ಕಾರ್ಯದರ್ಶಿ (ಯೋಜನೆ).
13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ-1

**(ದಿನಾಂಕ 12-4-2006ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006)**

1. ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ ಅಥವಾ ಉದ್ಭವಿಸುವ (ಅನುದಾನಕ್ಕೆ ಒಳಪಡಿಸಲಾಗಿದ್ದ) ಖಾಲಿ ಹುದ್ದೆಗಳನ್ನು ಮಿತವ್ಯಯ ಆದೇಶಗಳನ್ನು ಸಡಿಲಿಸಿ ತುಂಬಿಕೊಳ್ಳಲು ಹಾಗೂ ಅದಕ್ಕೆ ಅನುದಾನ ಸಹಿತ ಅನುಮೋದನೆ ಪಡೆಯಲು ಉದ್ದೇಶಿಸಿದ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ಕೆಳಕಂಡ ಪಟ್ಟಿ-1ರಲ್ಲಿ ಒಳಗೊಂಡ ಷರತ್ತು / ನಿಬಂಧನೆಗಳನ್ನು ಪೂರೈಸತಕ್ಕದ್ದು ಮತ್ತು ಸಂದರ್ಭಾನುಸಾರ, ಪಟ್ಟಿ-2 ಅಥವಾ ಪಟ್ಟಿ-3ರಲ್ಲಿ ಒಳಗೊಂಡ ಮಾನದಂಡಗಳನ್ನು, ಈ ಅನುಬಂಧದ ಅನ್ವಯ ನಿಗದಿಪಡಿಸಿದ ಕನಿಷ್ಠ ಮಟ್ಟಿಗಾದರೂ ಪೂರೈಸತಕ್ಕದ್ದು.

### ಪಟ್ಟಿ-1

*ಕ್ರಮ ಸಂಖ್ಯೆ 1 ರಿಂದ 5ರವರೆಗೆ ನಮೂದಿಸಿದ ಮಾನದಂಡಗಳು ಕಡ್ಡಾಯವಾಗಿ ಅನ್ವಯವಾಗುತ್ತವೆ* (non-negotiable norms):

<table>
<tr><th>ಕ್ರಮ ಸಖ್ಯೆ</th><th>ಮಾನದಂಡ</th></tr>
<tr><td>1.</td><td><u>ಹಾಜರಾತಿ:-</u><br>(ಅ) ಅನುದಾನಿತ ಖಾಸಗಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ, ಪ್ರತಿಯೊಂದು ವಿಭಾಗದಲ್ಲಿ ಕನಿಷ್ಠ 25 ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು. ಹೆಚ್ಚುವರಿ ವಿಭಾಗಗಳಲ್ಲಿ ಈ ಕೆಳಕಂಡಂತೆ ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು.
<table>
<tr><th>ಹಾಜರಾತಿ</th><th>ವಿಭಾಗಗಳು</th></tr>
<tr><td>1 ರಿಂದ 70</td><td>ಒಂದು</td></tr>
<tr><td>71 ರಿಂದ 140</td><td>ಎರಡು</td></tr>
<tr><td>141 ರಿಂದ 210</td><td>ಮೂರು</td></tr>
<tr><td>211 ರಿಂದ 280</td><td>ನಾಲ್ಕು</td></tr>
<tr><td>281 ರಿಂದ 350</td><td>ಐದು</td></tr>
</table>
</td></tr>
</table>

SO SEC-A

***(ಆ) ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ,*** ಪ್ರತಿಯೊಂದು ವಿಭಾಗದಲ್ಲಿ,ವಿಜ್ಞಾನ, ಕಲೆ ಮತ್ತು ವಾಣಿಜ್ಯ ವಿಷಯಗಳನ್ನು ಒಳಗೊಂಡ ವಿಭಾಗಗಳನ್ನು ಒಟ್ಟುಗೂಡಿಸಿ, ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು. ಪ್ರತಿಯೊಂದು ಭಾಷಾ ವಿಷಯಕ್ಕಾಗಿ ಒಬ್ಬರು ಉಪನ್ಯಾಸರು ಮತ್ತು ಪ್ರತಿಯೊಂದು ಐಚ್ಛಿಕ ವಿಷಯಕ್ಕಾಗಿ ಒಬ್ಬರು ಉಪನ್ಯಾಸಕರು ಇರತಕ್ಕದ್ದು. ಆದರೆ, ಇದಕ್ಕಾಗಿ, ಅಂದರೆ, ಪ್ರತಿಯೊಂದು ಭಾಷಾ ವಿಷಯಕ್ಕಾಗಿ ಕನಿಷ್ಠ 10 ವಿದ್ಯಾರ್ಥಿಗಳ ಹಾಜರಾತಿ ಮತ್ತು ಪ್ರತಿಯೊಂದು ಐಚ್ಛಿಕ ವಿಷಯಕ್ಕಾಗಿ ಕನಿಷ್ಠ 15 ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು. ಇದಲ್ಲದೆ, ಹೆಚ್ಚುವರಿ ವಿಭಾಗಗಳಿಗಾಗಿ ಈ ಕೆಳಕಂಡಂತೆ ವಿದ್ಯಾರ್ಥಿಗಳ ಕನಿಷ್ಠ ಹಾಜರಾತಿ ಇರತಕ್ಕದ್ದು.

| ***ಹಾಜರಾತಿ*** | ***ವಿಭಾಗಗಳು*** |
|---|---|
| 1 ರಿಂದ 100 | ಒಂದು |
| 101 ರಿಂದ 200 | ಎರಡು |
| 201 ರಿಂದ 300 | ಮೂರು |

2. ***ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿ ಹಾಜರಾತಿ :*** ದಾಖಲಾದ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 90ರಷ್ಟು ವಿದ್ಯಾರ್ಥಿಗಳು ಕಳೆದ ವರ್ಷದ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿ ಹಾಜರಾಗಿರತಕ್ಕದ್ದು.

3. ***ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯ ಫಲಿತಾಂಶ :-*** ಕಳೆದ ವರ್ಷದ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 40ರಷ್ಟು ಉತ್ತೀರ್ಣರಾಗಿರಬೇಕು. ಕಳೆದ ವರ್ಷದಲ್ಲಿ ಶೇಕಡ 40ಕ್ಕಿಂತ ಕಡಿಮೆ ಫಲಿತಾಂಶವಿದ್ದ ಪ್ರಕರಣಗಳಲ್ಲಿ, ಸಂಬಂಧಿಸಿದ ಸಂಸ್ಥೆ ,ಪ್ರಸ್ತುತ ಅಥವಾ ಮುಂದಿನ ವರ್ಷಗಳಲ್ಲಿ ಫಲಿತಾಂಶವನ್ನು ಉತ್ತಮಪಡಿಸಿ, ಶೇಕಡ 40ಕ್ಕಿಂತ ಕಡಿಮೆ ಇಲ್ಲದ ಫಲಿತಾಂಶ ಗಳಿಸಿದ ನಂತರ, ಅನುದಾನಿತ ಹುದ್ದೆಗಳ ಎದುರು ಉಂಟಾದ ರಿಕ್ತ ಸ್ಥಾನಗಳನ್ನು ತುಂಬಲು ಅನುಮತಿಯನ್ನು ಕೋರಬಹುದು.

4. ***ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮೀಸಲಾತಿ :*** ಸರ್ಕಾರ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಪ್ರಕಾರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಹಾಗೂ ಹೆಣ್ಣು ಮಕ್ಕಳಿಗಾಗಿ ದಾಖಲಾತಿಯಲ್ಲಿ ಸೀಟುಗಳನ್ನು

| | |
|---|---|
| | ಮೀಸಲಿಡತಕ್ಕದ್ದು. ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು. (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು).<br>ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕೊರತೆಯಾಗಿದ್ದಲ್ಲಿ , ನಿಗದಿತ ಕನಿಷ್ಠ ಮಟ್ಟಕ್ಕೆ ಅವರ ದಾಖಲಾತಿಯನ್ನು ಮುಂದಿನ ವರ್ಷದಲ್ಲಿ ಮಾಡಲು ಸಂಬಂಧಿಸಿದ ಸಂಸ್ಥೆ ವಿಶೇಷ ಪ್ರಯತ್ನವನ್ನು ನಡೆಸಿ, ಅದನ್ನು ಗಳಿಸಿದ ನಂತರ ಅನುದಾನಿತ ಹುದ್ದೆಗಳ ಎದುರು ಉಂಟಾದ ರಿಕ್ತ ಸ್ಥಾನಗಳನ್ನು ತುಂಬಲು ಅನುಮತಿಯನ್ನು ಕೋರಬಹುದು. |
| 5. | ***ನೇರ ನೇಮಕಾತಿಯಲ್ಲಿ ಮೀಸಲಾತಿ :*** ಸರ್ಕಾರ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಪ್ರಕಾರ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ನೇರ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸತಕ್ಕದ್ದು. ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಿಗೆ ಇದು ಅನ್ವಯವಾಗುವುದಿಲ್ಲ. |

## ಅನುಬಂಧ – 2

**ಸರ್ಕಾರಿ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006, ದಿನಾಂಕ: 21-03-2006ರ ಚೆಕ್‌ಲಿಸ್ಟ್.**

| | | |
|---|---|---|
| 01. | ಸಂಬಂಧಿಸಿದ ಅನುದಾನಿತ ಖಾಸಗಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾಗಿರತಕ್ಕದ್ದು. ಹಾಗೂ ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸಿರಬೇಕು | |
| 02. | ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ ಮತ್ತು ನೊಂದಣಿ] ನಿಯಮಾವಳಿ, 1997ರ ಪ್ರಕಾರ ನೊಂದಾವಣಿಯಾಗಿರತಕ್ಕದ್ದು. ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999ರ ಪ್ರಕಾರ ಮಾನ್ಯತೆಯನ್ನು ಪಡೆದು, ಪ್ರಸಕ್ತ ಸಾಲಿಗೆ ನವೀಕರಣವಾಗಿರತಕ್ಕದ್ದು | |
| 03. | ಸಂಬಂಧಿಸಿದ ಶಿಕ್ಷಣ ಸಂಸ್ಥೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳ [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದೀಕರಣ] ನಿಯಮಾವಳಿ, 1995ರ, ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ] ನಿಯಮಗಳು, 1999 ಮತ್ತು ಇತರ ಸಂಬಂಧಿತ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೇ, ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿರತಕ್ಕದ್ದು ಮತ್ತು ಮಕ್ಕಳಿಗೆ ಹಾನಿಕಾರಕವಾದ ಯಾವುದೇ ರೀತಿಯ ಅನಾರೋಗ್ಯಕರವಾದ ವಾತಾವರಣವನ್ನು ಹೊಂದಿರಬಾರದು. ಮಕ್ಕಳ ಶೈಕ್ಷಣಿಕ ಚಟುವಟಿಕೆ ಉತ್ತಮ ಮಟ್ಟದಲ್ಲಿರಲು | |

| | | |
|---|---|---|
| | ಅಗತ್ಯವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕದ್ದು. | |
| 04. | ಕ್ರಮ ಸಂಖ್ಯೆ: [3]ರ ಉದ್ದೇಶಕ್ಕಾಗಿ, **<u>ಅನುಬಂಧ-1</u>** ರಲ್ಲಿ ನಿಗದಿಪಡಿಸಿದಂತೆ, ಸಂಬಂಧಿಸಿದ ಪ್ರೌಢಶಾಲೆಯನ್ನು/ಪದವಿ ಪೂರ್ವ ಕಾಲೇಜನ್ನು ಮೌಲ್ಯಮಾಪನಕ್ಕೆ ಒಳಪಡಿಸತಕ್ಕದ್ದು. ಆ ಮೌಲ್ಯಮಾಪನದ ಪ್ರಕಾರ ಸರಾಸರಿ 60ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿದ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಪ್ರಸ್ತುತ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹರಾಗುವುದಿಲ್ಲ. | |
| 05. | ಕರ್ನಾಟಕ ಶಿಕ್ಷಣ ಸಂಸ್ಥೆಗಳ [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999ರ ಅಡಿಯಲ್ಲಿ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿ ರಚನೆಯನ್ವಯ ನೇಮಕಾತಿ ಮಾಡಿಕೊಂಡಿರಬೇಕು, | |
| 06. | ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಅನುಬಂಧ-1ರ ಕ್ರಮ ಸಂಖ್ಯೆ: [1]ರಲ್ಲಿ ಉಲ್ಲೇಖಿಸಿದಂತೆ ಹೊಂದಿರತಕ್ಕದ್ದು. | |
| 07. | ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ಅನುದಾನಕ್ಕೆ ಒಳಪಡಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾಗಿರತಕ್ಕದ್ದು. | |
| 08. | ನೇಮಕಾತಿ ಮಾಡಿಕೊಂಡಿರುವ ಹುದ್ದೆಯು ನಿಧನ, ನಿವೃತ್ತಿ, ರಾಜೀನಾಮೆ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಖಾಲಿ ಆಗಿರತಕ್ಕದ್ದು | |
| 09. | ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಶಿಕ್ಷಕರು/ಉಪನ್ಯಾಸಕರು ನಿಯಮಗಳ ಪ್ರಕಾರ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು | |
| 10. | ಈಗಾಗಲೇ ನೇಮಕವಾಗಿರುವ ಅಥವಾ ಮುಂದೆ ನೇಮಕವಾಗುವ ಶಿಕ್ಷಕರ/ಉಪನ್ಯಾಸಕರ ನೇಮಕಾತಿಯು ನಿಗದಿತ ಪ್ರಚಲಿತ ಸಿಬ್ಬಂದಿ | |

| | | |
|---|---|---|
| | ಮಾದರಿ ಮತ್ತು ನಿಯಮಗಳನ್ವಯ ಆಗಿರಬೇಕು/ಆಗಿರತಕ್ಕದ್ದು. | |
| 11. | ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿ ಮಾಡಿಕೊಂಡ ನೇಮಕಾತಿಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999, ಈ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿರತಕ್ಕದ್ದು. ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆಯಾಗದಿದ್ದಲ್ಲಿ ನಿಯಮಗಳಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಸದರಿ ನಿಯಮಗಳ ಅನುಬಂಧ-1ರನ್ವಯ, ಅದನ್ನು ಮೇಲೆ [3]ರಲ್ಲಿ ಓದಲಾದ ದಿನಾಂಕ: 03-02-2001ರ ಅಧಿಸೂಚನೆಯಂತೆ ತಿದ್ದುಪಡಿ ಮಾಡಿ ನಿಗದಿಪಡಿಸಿದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ, ಆ ಸಮಿತಿಯ ಅನುಮೋದನೆಯನ್ನು ಪಡೆದು ತದನಂತರ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು. | |
| 12. | ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ, ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಸಂಸ್ಥೆಗಳು ಈ ಆದೇಶದಡಿ, ನೇಮಕಾತಿಗಳ ಅನುದಾನ ಸಹಿತ ಅನುಮೋದನೆಗೆ ಅರ್ಹತೆ ಪಡೆಯುವುದಿಲ್ಲ. | |
| 13. | ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ./ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ ಪಿ.ಯು.ಸಿ. ಪರೀಕ್ಷೆಯ ಸಾಮಾನ್ಯ ಫಲಿತಾಂಶವು ಅನುಬಂಧ-1ರ ಕ್ರಮ ಸಂಖ್ಯೆ: [3]ರಲ್ಲಿ ಉಲ್ಲೇಖಿಸಿದಂತೆ ಇರತಕ್ಕದ್ದು. | |
| 14. | ಕರ್ನಾಟಕ ಸಂಘಗಳ ನೊಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರಬೇಕು ಹಾಗೂ ಇಲಾಖೆಯ ಮಾಹಿತಿಗಾಗಿ ಪಿಟಿಆರ್ ಮತ್ತು ಸಂಘದ | |

| | | |
|---|---|---|
| | ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು [ಸಕ್ಷಮ ಪ್ರಾಧಿಕಾರಿಯಿಂದ ಧೃಢೀಕರಿಸಲ್ಪಟ್ಟಿರಬೇಕು] ಸಲ್ಲಿಸತಕ್ಕದ್ದು. | |
| 15. | ದಿನಾಂಕ: 01-02-2006ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 19 ಟಿಪಿಯು 2004ರಲ್ಲಿ ಹೆಚ್ಚುವರಿ ವಿಭಾಗ/ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವುದನ್ನು ರದ್ದುಪಡಿಸಿರುವ ಹೆಚ್ಚುವರಿ ವಿಭಾಗ/ವಿಷಯಗಳಿಂದ ಉದ್ಭವಿಸುವ ಖಾಲಿ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ. | |
| 16. | ಹೆಚ್ಚುವರಿ ಶಿಕ್ಷಕರ/ಉಪನ್ಯಾಸಕರ ಹುದ್ದೆ ಎಂದು ಗುರುತಿಸಿ ಹೆಚ್ಚುವರಿ ಶಿಕ್ಷಕರನ್ನು ಬೇರೆ ಶಾಲೆಗಳಿಗೆ ಸ್ಥಳಾಂತರಿಸಿದ ಖಾಲಿ ಹುದ್ದೆಗಳು ತಾನಾಗಿ ರದ್ದಾಗಿದ್ದು ಅವುಗಳನ್ನು ತುಂಬಲು ಅವಕಾಶವಿಲ್ಲ. | |
| 17. | ಹೆಚ್ಚುವರಿ ಶಿಕ್ಷಕರನ್ನು/ಉಪನ್ಯಾಸಕರನ್ನು ಸ್ಥಳಾಂತರಿಸಿ ಪುನರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ಅವರನ್ನು ಕೆಲಸಕ್ಕೆ ಸೇರಿಸಿ ಕೊಳ್ಳದಿದ್ದರೆ ಅಂತಹ ಖಾಲಿ ಹುದ್ದೆಗಳನ್ನು ಶಾಶ್ವತ ಅನುದಾನರಹಿತ ಎಂದು ಆದೇಶಿಸಿದ್ದು, ಅವುಗಳನ್ನು ತುಂಬಲು ಅವಕಾಶವಿಲ್ಲ. | |
| 18. | ಸ್ವಾಭಾವಿಕ ಬೆಳವಣಿಗೆ ಮತ್ತು ಹೆಚ್ಚುವರಿ ವಿಭಾಗ/ವಿಷಯದಂತಹ ಕಾರಣಗಳಿಂದ ಉದ್ಭವಿಸಿದ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ. | |
| 19. | ಶಾಲೆಯ/ಕಾಲೇಜಿನ ಹೆಸರು | |
| 20. | ಸಂಸ್ಥೆಯ ಹೆಸರು ಮತ್ತು ವಿಳಾಸ | |
| 21. | ಮಾನ್ಯತೆ ಪಡೆದ ವಿವರ | |
| 22. | ಹುದ್ದೆಯ ಪದನಾಮ | |
| 23. | ರಿಕ್ತ ಸ್ಥಾನ ಅನುದಾನಕ್ಕೆ ಒಳಪಡಿಸಿದ ಆದೇಶ ಸಂಖ್ಯೆ. ದಿನಾಂಕ [ಪ್ರತಿ ಲಗತ್ತಿಸುವುದು] | |
| 24. | ರಿಕ್ತ ಸ್ಥಾನ ಉದ್ಭವವಾದ ಕಾರಣ | |
| 25. | ರಿಕ್ತ ಸ್ಥಾನ ಉದ್ಭವವಾದ ದಿನಾಂಕ | |
| 26. | ಹುದ್ದೆ ತುಂಬಲು ಅನುಮತಿ ಪಡೆದ ಆದೇಶ ಸಂಖ್ಯೆ ಹಾಗೂ ದಿನಾಂಕ ಹಾಗೂ ಅನುಮತಿ ನೀಡಿದ ಪ್ರಾಧಿಕಾರ. | |
| 27. | ರಿಕ್ತ ಸ್ಥಾನವನ್ನು ಯಾವ ವರ್ಗಕ್ಕಾಗಿ | |

| | | |
|---|---|---|
| | ಮೀಸಲಿಡಲಾಗಿತ್ತು, | |
| 28. | ಆ ವರ್ಗದವರನ್ನೆ ಆಯ್ಕೆ ಮಾಡಲಾಗಿದೆಯೇ, | |
| 29. | ಅನುದಾನಕ್ಕೆ ಒಳಪಡಿಸಲು ಪ್ರಸ್ತಾಪಿಸಲಾದ ಹುದ್ದೆ, ದಿನಾಂಕ: 02-02-2000ರ ನಿಯಮಗಳಡಿ/ಪ್ರಚಲಿತ ನಿಯಮದಡಿ ಮಾದರಿ ಸಿಬ್ಬಂದಿ ರಚನೆಗೆ ಅನುಗುಣವಾಗಿದೆಯೇ. | |
| 30. | ಆಯ್ಕೆಯಾದವರ ಹೆಸರು. | |
| 31. | ಹುದ್ದೆಯನ್ನು ತುಂಬಲು ಜಾಹಿರಾತು ನೀಡಿದ ದಿನಾಂಕ | |
| 32. | ಸಂದರ್ಶನ ನಡೆಸಿದ ದಿನಾಂಕ | |
| 33. | ಹುದ್ದೆಗೆ ನಿಗದಿಪಡಿಸಿದ ನಿಗದಿತ ವಿದ್ಯಾರ್ಹತೆ ಹಾಗೂ ನಿಗದಿತ ವಯೋಮಿತಿ | |
| 34 | (ಅ) ಆಯ್ಕೆಯಾದವರ ವಿದ್ಯಾರ್ಹತೆ ಹಾಗೂ ವಯಸ್ಸು ಏನು ?<br>(ಆ) ಇವು ಚಾಲ್ತಿಯಲ್ಲಿರುವ ನಿಯಮ/ಆದೇಶಗಳ ಪ್ರಕಾರ ಇದೆಯೇ ? | |
| 35. | ಆಯ್ಕೆ ನಿಯಮಾನುಸಾರ ಆಗಿದೆಯೇ | |
| 36. | ಆಯ್ಕೆ ಪಟ್ಟಿ ಮಾಡಿ ಪ್ರಕಟಿಸಿದ ದಿನಾಂಕ | |
| 37. | ನೇಮಕಾತಿಯ ಅನುಮೋದನೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಸಂಬಂಧಿಸಿದ ಜಿಲ್ಲಾ ಪಂಚಾಯತ್ತಿನ ಸಿ.ಇ.ಒ.ರವರ ಅಧ್ಯಕ್ಷತೆಯಲ್ಲಿ ಇರುವ ಸ್ಕ್ರೀನಿಂಗ್ ಕಮಿಟಿಯ ಮುಂದೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ. ಸಲ್ಲಿಸದೇ ಇದ್ದಲ್ಲಿ, ಅದಕ್ಕೆ ಕಾರಣ. ಸಲ್ಲಿಸಿದ್ದಲ್ಲಿ ಸ್ಕ್ರೀನಿಂಗ್ ಸಮಿತಿಯ ಶಿಫಾರಸ್ಸು. | |
| 38. | ನೇಮಕಾತಿ ಮಾಡಿದ್ದಲ್ಲಿ ನೇಮಕಾತಿ ದಿನಾಂಕ | |
| 39. | ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಯಾಗಿದೆ. | |
| 40. | ಉಪ ನಿರ್ದೇಶಕರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು. [ಪರಿಶೀಲಿಸಬಹುದು, ಪರಿಗಣಿಸಬಹುದು, ಆದೇಶಕ್ಕಾಗಿ, ಮುಂದಿನ ಕ್ರಮಕ್ಕಾಗಿ ಎಂದು ಬರೆಯದೇ ಸ್ಪಷ್ಟವಾಗಿ ಶಿಫಾರಸ್ಸು ಮಾಡಿದೆ, ಶಿಫಾರಸ್ಸು ಮಾಡಿಲ್ಲ ಎಂದು ನಮೂದಿಸಬೇಕು]. | |

## <u>ಪಟ್ಟಿ - 2</u>

**ಅನುದಾನಿತ ಖಾಸಗಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಮೂಲಭೂತ ಸೌಲಭ್ಯಗಳು ಹಾಗೂ ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಒದಗಿಸಿರುವ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ (Evaluation of the infrastructure provided) :**

| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ ಅಂಕಗಳು |
|---|---|---|
| 1. | ಆರ್.ಸಿ.ಸಿ./ಪಕ್ಕಾ ಕಟ್ಟಡ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಠ 6 ಚದರ ಅಡಿ ಜಾಗ (ಅಚಿಡಿಠಿಜಾ ಂಡಿಜಚಿ) ಹಾಗೂ ಪ್ರತಿಯೊಂದು ತರಗತಿ ಕೊಠಡಿಯ ಅಳತೆ ಕನಿಷ್ಠ 360 ಚದರ ಅಡಿ ಇರತಕ್ಕದ್ದು. 360 ಚದರ ಅಡಿಗಿಂತ ಕಡಿಮೆ ಅಳತೆ ಇದ್ದಲ್ಲಿ, ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ.<br><br>ಪ್ರತಿಯೊಂದು ವಿಭಾಗಕ್ಕಾಗಿ ಒಂದು ಕೊಠಡಿ ಇರತಕ್ಕದ್ದು.<br><br>ಕಟ್ಟಡದ ಬುನಾದಿ ಗಟ್ಟಿಯಾಗಿರತಕ್ಕದ್ದು ಹಾಗೂ ಪಕ್ಕಾ ಗೋಡೆಗಳು ಹೊಂದಿರತಕ್ಕದ್ದು. ಛಾವಣಿಯು ಆರ್.ಸಿ.ಸಿ. ಅಥವಾ ಸಿಮೆಂಟ್ ಅಥವಾ ಹೆಂಚು, ಇದರಿಂದ ಕಟ್ಟಿರತಕ್ಕದ್ದು.<br><br>ಪ್ರತಿಯೊಂದು ಕೊಠಡಿಯಲ್ಲಿ ಸಾಕಷ್ಟು ಬೆಳಕು, ಗಾಳಿ ಮತ್ತು ಅಗ್ನಿನಿರೋಧಕ ಯಂತ್ರಗಳು ಇರತಕ್ಕದ್ದು. . . . . . . . . . . . .<br><br>ಕಟ್ಟಡದ ಹಾಗೂ ಸಂಪೂರ್ಣ ನಿವೇಶನದ ಭಾವಚಿತ್ರವನ್ನು ಹಾಗೂ ಕಟ್ಟಡದ ಪ್ಲಾನ್ ಮತ್ತು ನಿವೇಶನದ ಪ್ಲಾನ್‌ರ ಪ್ರತಿಗಳನ್ನು ಲಗತ್ತಿಸತಕ್ಕದ್ದು. | *40 ಅಂಕಗಳು* |
| | ಮುಖ್ಯೋಪಾಧ್ಯಾಯರು, ಸಿಬ್ಬಂದಿ ಮತ್ತು ಕಚೇರಿಗಾಗಿ ಪ್ರತ್ಯೇಕ ಕೊಠಡಿಗಳು ಇರತಕ್ಕದ್ದು (ಒಟ್ಟು 3 ಕೊಠಡಿಗಳು) . . . . . . . . . . . . . . . . . . .<br><br>ಪ್ರತಿಯೊಂದು ಕೊಠಡಿಯ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *(ಗರಿಷ್ಠ 6 ಅಂಕಗಳು)*<br>ಸದರಿ 6 ಅಂಕಗಳ ಪೈಕಿ ಪ್ರತಿ ಕೊಠಡಿಗಾಗಿ *2 ಅಂಕಗಳು.*<br>*(ಒಟ್ಟು 6 ಅಂಕಗಳು)* |

| | | |
|---|---|---|
| 2. | **ಗ್ರಂಥಾಲಯ/ಓದುವ ಸ್ಥಳಾವಕಾಶ**<br>(ಅ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಟ 500 ಪುಸ್ತಕಗಳನ್ನೊಳಗೊಂಡ ಶಿಕ್ಷಕರ ಗ್ರಂಥಾಲಯ . . . . . . . . | *1.5 ಅಂಕಗಳು* |
| | (ಆ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಟ 500 ಪುಸ್ತಕಗಳನ್ನು ಒಳಗೊಂಡ ವಿದ್ಯಾರ್ಥಿಗಳ ಗ್ರಂಥಾಲಯ. ಅದರಲ್ಲಿ ಮ್ಯಾಪ್, ಸಿ.ಡಿ. ಮತ್ತು ಚಾರ್ಟ್‌ಗಳು ಒಳಗೊಂಡಿರಬಹುದು. . . . . . . . . . . . . . . . . . .<br>ಗ್ರಂಥಾಲಯ ಕೊಠಡಿಯ ಹಾಗು ಪುಸ್ತಕಗಳ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *1.5 ಅಂಕಗಳು* |
| 3. | ***ಕ್ರೀಡಾ ಕೊಠಡಿ*** . . . . . . . . . . . . | *3 ಅಂಕಗಳು* |
| 4. | **ಪ್ರಯೋಗಾಲಯದ ಕೊಠಡಿ**<br>ಕನಿಷ್ಟ 360 ಚ.ಅ. ಅಳತೆಯ ಪ್ರತ್ಯೇಕ ಪ್ರಯೋಗಾಲಯ ಕೊಠಡಿ . . . . . . . . . . . . . . . . . . . .<br>ಪ್ರಯೋಗಾಲಯದ ಕೊಠಡಿಯ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *3 ಅಂಕಗಳು* |
| 5. | **ಹೆಣ್ಣುಮಕ್ಕಳಿಗಾಗಿ ಶೌಚಾಲಯ**<br>ಹೆಣ್ಣುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು. . . . . . . . . . . . . . . . . .<br>ಹೆಣ್ಣುಮಕ್ಕಳ ಶೌಚಾಲಯದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *8 ಅಂಕಗಳು* |
| 6. | **ಗಂಡುಮಕ್ಕಳಿಗಾಗಿ ಶೌಚಾಲಯ**<br>ಗಂಡುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು. . . . . . . . . . . . . . . . . . .<br>ಗಂಡುಮಕ್ಕಳ ಶೌಚಾಲಯದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *7 ಅಂಕಗಳು* |
| 7. | **ನೀರಿನ ಟ್ಯಾಂಕ್ (ಸ್ಥಿರವಾದ ಸಿಮೆಂಟ್ ಟ್ಯಾಂಕ್ ಅಥವಾ ಸಿಂಥಟಿಕ್ ಫೈಬರ್ ಟ್ಯಾಂಕ್ ಇತ್ಯಾದಿ)**<br>50 ರಿಂದ 100 ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಟ 500 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. | |

| | | |
|---|---|---|
| | 100 ಕ್ಕಿಂತ ಹೆಚ್ಚು ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಟ 1000 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. . . . . . .<br><br>ನೀರಿನ ಟ್ಯಾಂಕ್‌ನ ಭಾವಚಿತ್ರವನ್ನು ಲಗತ್ತಿಸತಕ್ಕದ್ದು | *10 ಅಂಕಗಳು* |
| 8. | **ಪೀಠೋಪಕರಣ ಮತ್ತು ಕಪ್ಪುಹಲಗೆ**<br>(ಅ) ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇದ್ದಲ್ಲಿ<br>(ಆ) ಹಾಜರಾದ ಅರ್ಧದಷ್ಟು ಮಕ್ಕಳಿಗೆ ಮಾತ್ರ ಕುಳಿತುಕೊಳ್ಳಲು ಇದ್ದಲ್ಲಿ . . . . . . . . . . . . . . . . .<br>(ಇ) ಹಾಜರಾದ ಒಂದನೇ ನಾಲ್ಕು ಭಾಗದಷ್ಟು ಮಕ್ಕಳಿಗೆ ಮಾತ್ರ ಕುಳಿತುಕೊಳ್ಳಲು ಇದ್ದಲ್ಲಿ . . . . . . . . . . . . . .<br>(ಈ) (ಇ) ಗಿಂತ ಕಡಿಮೆ ಇದ್ದಲ್ಲಿ . . . . . . . . . . .<br>(ಪ್ರತಿಯೊಂದು ಕೊಠಡಿಯಲ್ಲಿರುವ ಪೀಠೋಪಕರಣಗಳ ಭಾವಚಿತ್ರವನ್ನು ಲಗತ್ತಿಸತಕ್ಕದ್ದು.) | *(ಗರಿಷ್ಟ 10 ಅಂಕಗಳು)*<br>*10 ಅಂಕಗಳು*<br>ಸದರಿ 10 ಅಂಕಗಳ ಪೈಕಿ *5 ಅಂಕಗಳು* ಮಾತ್ರ<br>ಸದರಿ 10 ಅಂಕಗಳ ಪೈಕಿ *2 ಅಂಕಗಳು* ಮಾತ್ರ<br>*ಯಾವುದೇ ಅಂಕಗಳು ಇಲ್ಲ* |
| 9. | **ಪಾಠೋಪಕರಣ, ಕಲಿಕಾ ಮತ್ತು ಆಟೋಪಕರಣ**<br>(ಅ) ರೂ. 6,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು ಇದ್ದಲ್ಲಿ . . . . . . . . . . . . . . .<br>(ಆ) ರೂ. 3,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು, ಆದರೆ ರೂ. 6,000/- ಕಡಿಮೆ ಇದ್ದಲ್ಲಿ . . .<br>(ಇ) ರೂ. 3,000/- ಕ್ಕಿಂತ ಕಡಿಮೆ ಬೆಲೆಯ ಉಪಕರಣಗಳು.. | *(ಗರಿಷ್ಟ 5 ಅಂಕಗಳು)*<br>*5 ಅಂಕಗಳು*<br>ಸದರಿ 5 ಅಂಕಗಳ ಪೈಕಿ *2 ಅಂಕಗಳು*<br>*ಯಾವುದೇ ಅಂಕಗಳು ಇಲ್ಲ.* |
| 10. | **ಆಟದ ಮೈದಾನ**<br>(ಅ) ವಾಲಿಬಾಲ್ ಕೋರ್ಟಿನ ಎರಡು ಪಟ್ಟು ಅಳತೆಯ ಅಥವಾ ಅದಕ್ಕಿಂತ ಹೆಚ್ಚಿನ ಆಟದ ಮೈದಾನ ಇದ್ದಲ್ಲಿ . . .<br>(ಆ) ಒಂದು ವಾಲಿಬಾಲ್ ಕೋರ್ಟಿನ ಅಳತೆಯಷ್ಟು ಆಟದ ಮೈದಾನ ಇದ್ದಲ್ಲಿ . . . . . . . . . . . . . . . . . .<br>(ಇ) (ಆ) ಗಿಂತ ಕಡಿಮೆ ಅಳತೆಯ ಆಟದ ಮೈದಾನ ಇದ್ದಲ್ಲಿ . . . . . . . . . . . . . . . . . . . . . . . .<br>ಆಟದ ಮೈದಾನದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | *(ಗರಿಷ್ಟ 5 ಅಂಕಗಳು)*<br>*5 ಅಂಕಗಳು*<br>ಸದರಿ 5 ಅಂಕಗಳ ಪೈಕಿ *2 ಅಂಕಗಳು*<br>*ಯಾವುದೇ ಅಂಕಗಳು ಇಲ್ಲ* |
| | **ಒಟ್ಟು** | 100 ಅಂಕಗಳು |

## ಪಟ್ಟಿ - 3

**ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಮೂಲಭೂತ ಸೌಲಭ್ಯಗಳು ಹಾಗೂ ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಒದಗಿಸಿರುವ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ (Evaluation of the infrastructure provided)**

| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ CAPಮಿತಿ |
|---|---|---|
| 1. | ಆರ್.ಸಿ.ಸಿ./ಪಕ್ಕಾ ಕಟ್ಟಡ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಟ 8 ಚದರ ಅಡಿ ಜಾಗ ಹಾಗೂ ಪ್ರತಿಯೊಂದು ತರಗತಿ ಕೊಠಡಿಯ ಅಳತೆ ಕನಿಷ್ಟ 660 ಚದರ ಅಡಿ ಇರತಕ್ಕದ್ದು. 660 ಚದರ ಅಡಿಗಿಂತ ಕಡಿಮೆ ಅಳತೆ ಇದ್ದಲ್ಲಿ, ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ.<br>ಪ್ರತಿಯೊಂದು ವಿಭಾಗಕ್ಕಾಗಿ ಒಂದು ಕೊಠಡಿ ಇರತಕ್ಕದ್ದು.<br><br>ಕಟ್ಟಡದ ಬುನಾದಿ ಗಟ್ಟಿಯಾಗಿರತಕ್ಕದ್ದು ಹಾಗೂ ಪಕ್ಕಾ ಗೋಡೆಗಳು ಹೊಂದಿರತಕ್ಕದ್ದು. ಛಾವಣಿಯು ಆರ್.ಸಿ.ಸಿ. ಅಥವಾ ಸಿಮೆಂಟ್ ಅಥವಾ ಹೆಂಚು, ಇದರಿಂದ ಕಟ್ಟಿರತಕ್ಕದ್ದು.<br><br>ಪ್ರತಿಯೊಂದು ಕೊಠಡಿಯಲ್ಲಿ ಸಾಕಷ್ಟು ಬೆಳಕು, ಗಾಳಿ ಮತ್ತು ಅಗ್ನಿನಿರೋಧಕ ಯಂತ್ರಗಳು ಇರತಕ್ಕದ್ದು. . . . . . . . . . . . .<br><br>ಕಟ್ಟಡದ ಹಾಗು ಸಂಪೂರ್ಣ ನಿವೇಶನದ ಭಾವಚಿತ್ರವನ್ನು ಹಾಗೂ ಕಟ್ಟಡದ ಪ್ಲಾನ್ ಮತ್ತು ನಿವೇಶನದ ಪ್ಲಾನ್‌ರ ಪ್ರತಿಗಳನ್ನು ಲಗತ್ತಿಸತಕ್ಕದ್ದು. | 40 ಅಂಕಗಳು |
| 2. | ಕಟ್ಟಡದಲ್ಲಿ ಈ ಕೆಳಕಂಡ ಕೊಠಡಿಗಳು ಒಳಗೊಂಡಿರತಕ್ಕದ್ದು:-<br>ಪಿ.ಯು.ಸಿ.ಯನ್ನು ಪ್ರಾರಂಭಿಸಿದ ಮೊದಲನೇಯ ಸಾಲಿನಲ್ಲಿ ಎರಡು ವಿಭಾಗಗಳೊಂದಿಗೆ 40 ರಿಂದ 80 ವಿದ್ಯಾರ್ಥಿಗಳ ಸಂಖ್ಯಾಬಲ ಇದ್ದಲ್ಲಿ ಈ ಕೆಳಕಂಡ ಕೊಠಡಿಗಳನ್ನು | |

## ಪಟ್ಟಿ - 3

**ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಮೂಲಭೂತ ಸೌಲಭ್ಯಗಳು ಹಾಗೂ ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಒದಗಿಸಿರುವ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ (Evaluation of the infrastructure provided)**

| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ CAPಮಿತಿಮಿ |
|---|---|---|
| 1. | ಆರ್.ಸಿ.ಸಿ./ಪಕ್ಕಾ ಕಟ್ಟಡ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಟ 8 ಚದರ ಅಡಿ ಜಾಗ ಹಾಗೂ ಪ್ರತಿಯೊಂದು ತರಗತಿ ಕೊಠಡಿಯ ಅಳತೆ ಕನಿಷ್ಠ 660 ಚದರ ಅಡಿ ಇರತಕ್ಕದ್ದು. 660 ಚದರ ಅಡಿಗಿಂತ ಕಡಿಮೆ ಅಳತೆ ಇದ್ದಲ್ಲಿ, ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ<br>ಪ್ರತಿಯೊಂದು ವಿಭಾಗಕ್ಕಾಗಿ ಒಂದು ಕೊಠಡಿ ಇರತಕ್ಕದ್ದು.<br><br>ಕಟ್ಟಡದ ಬುನಾದಿ ಗಟ್ಟಿಯಾಗಿರತಕ್ಕದ್ದು ಹಾಗೂ ಪಕ್ಕಾ ಗೋಡೆಗಳು ಹೊಂದಿರತಕ್ಕದ್ದು. ಛಾವಣಿಯು ಆರ್.ಸಿ.ಸಿ. ಅಥವಾ ಸಿಮೆಂಟ್ ಅಥವಾ ಹೆಂಚು, ಇದರಿಂದ ಕಟ್ಟಿರತಕ್ಕದ್ದು.<br><br>ಪ್ರತಿಯೊಂದು ಕೊಠಡಿಯಲ್ಲಿ ಸಾಕಷ್ಟು ಬೆಳಕು, ಗಾಳಿ ಮತ್ತು ಅಗ್ನಿನಿರೋಧಕ ಯಂತ್ರಗಳು ಇರತಕ್ಕದ್ದು. . . . . . . . . . . . .<br>ಕಟ್ಟಡದ ಹಾಗು ಸಂಪೂರ್ಣ ನಿವೇಶನದ ಭಾವಚಿತ್ರವನ್ನು ಹಾಗೂ ಕಟ್ಟಡದ ಪ್ಲಾನ್ ಮತ್ತು ನಿವೇಶನದ ಪ್ಲಾನ್‌ರ ಪ್ರತಿಗಳನ್ನು ಲಗತ್ತಿಸತಕ್ಕದ್ದು. | 40 ಅಂಕಗಳು |
| 2. | ಕಟ್ಟಡದಲ್ಲಿ ಈ ಕೆಳಕಂಡ ಕೊಠಡಿಗಳು ಒಳಗೊಂಡಿರತಕ್ಕದ್ದು:-<br>ಪಿ.ಯು.ಸಿ.ಯನ್ನು ಪ್ರಾರಂಭಿಸಿದ ಮೊದಲನೇಯ ಸಾಲಿನಲ್ಲಿ ಎರಡು ವಿಭಾಗಗಳೊಂದಿಗೆ 40 ರಿಂದ 80 ವಿದ್ಯಾರ್ಥಿಗಳ ಸಂಖ್ಯಾಬಲ ಇದ್ದಲ್ಲಿ ಈ ಕೆಳಕಂಡ ಕೊಠಡಿಗಳನ್ನು | |

| | | |
|---|---|---|
| | (ಅ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 5000 ಪುಸ್ತಕ ಗ ಳನ್ನು ಒಳಗೊಂಡ ಶಿಕ್ಷಕರ ಗ್ರಂಥಾಲಯ. . . . . . . . . .<br>(ಅ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಟ 5000 ಪುಸ್ತಕಗಳನ್ನು ಒಳಗೊಂಡ ವಿದ್ಯಾರ್ಥಿಗಳ ಗ್ರಂಥಾಲಯ. ಅದರಲ್ಲಿ ಮ್ಯಾಪ್, ಸಿ.ಡಿ. ಮತ್ತು ಚಾರ್ಟ್‌ಗಳು ಒಳಗೊಂಡಿರಬಹುದು. . . . . . . .<br>ಗ್ರಂಥಾಲಯ ಕೊಠಡಿಯ ಹಾಗು ಪುಸ್ತಕಗಳ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | ಳು)<br>ಸದರಿ 3 ಅಂಕಗಳ ಪೈಕಿ 1.5 ಅಂಕಗಳು<br>ಸದರಿ 3 ಅಂಕಗಳ ಪೈಕಿ 1.5 CAPಎಎಎ |
| | . . . . . . . | 3 ಅಂಕಗಳು |
| 3. | ಕ್ರೀಡಾ ಕೊಠಡಿ<br>. | |
| 4. | ಪ್ರಯೋಗ ಶಾಲಾ ಉಪಕರಣಗಳು ಮತ್ತು ರಾಸಾಯನಗಳು:<br>ಇಲಾಖೆ ನಿಗದಿಪಡಿಸಿದ ಮಾದರಿ ಪಟ್ಟಿಯ ಪ್ರಕಾರ ಕನಿಷ್ಟ 30 ಸಾವಿರ ರೂಪಾಯಿಗಳ ಮೌಲ್ಯದ ಉಪಕರಣಗಳು ಇದ್ದು, ಅದರ ಪೈಕಿ ಕನಿಷ್ಟ ರೂ.10,000ಗಳಷ್ಟು ಮೌಲ್ಯದ ಉಪಕರಣಗಳು ರಾಸಯನ ಶಾಸ್ತ್ರ□ಕ್ಕಾಗಿ ಮತ್ತು ರೂ.10,000ಗಳಷ್ಟು ಮೌಲ್ಯದ ಉಪಕರಣಗಳು ಭೌತ ಶಾಸ್ತ್ರಕ್ಕಾಗಿ ಹಾಗೂ ಉಳಿದ ವಿಷಯಗಳಿಗಾಗಿ ರೂ.10,000ಗಳಷ್ಟು ಮೌಲ್ಯದ ಉಪಕರಣಗಳು.<br>. . . . . . .<br>ಪ್ರಯೋಗ ಶಾಲೆಯ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | 3 ಅಂಕಗಳು |
| 5. | ಹೆಣ್ಣುಮಕ್ಕಳಿಗಾಗಿ ಶೌಚಾಲಯ<br>ಹೆಣ್ಣುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು.<br>ಹೆಣ್ಣುಮಕ್ಕಳ ಶೌಚಾಲಯದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. . . . | 8 ಅಂಕಗಳು |
| 6. | ಗಂಡುಮಕ್ಕಳಿಗಾಗಿ ಶೌಚಾಲಯ<br>ಗಂಡುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು.<br>ಗಂಡುಮಕ್ಕಳ ಶೌಚಾಲಯದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. . . . . | 5 ಅಂಕಗಳು |
| 7. | ನೀರಿನ ಟ್ಯಾಂಕ್ (ಸ್ಥಿರವಾದ ಸಿಮೆಂಟ್ ಟ್ಯಾಂಕ್ ಅಥವಾ | |

| | | |
|---|---|---|
| | **ಸಿಂಥಟಿಕ್ ಫೈಬರ್ ಟ್ಯಾಂಕ್ ಇತ್ಯಾದಿ)** 50 ರಿಂದ 100 ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಟ 500 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. 100 ಕ್ಕಿಂತ ಹೆಚ್ಚು ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಟ 1000 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. . . . . . . . . . .<br>ನೀರಿನ ಟ್ಯಾಂಕ್‌ನ ಭಾವಚಿತ್ರವನ್ನು ಲಗತ್ತಿಸತಕ್ಕದ್ದು | *5 ಅಂಕಗಳು* |
| 8. | **ಪೀಠೋಪಕರಣ:**<br>(ಅ) ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇದ್ದಲ್ಲಿ. (ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇಲ್ಲದೇ ಇದ್ದಲ್ಲಿ ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ) . . . . . . . .<br>(ಪ್ರತಿಯೊಂದು ಕೊಠಡಿಯಲ್ಲಿರುವ ಪೀಠೋಪಕರಣಗಳ ಭಾವಚಿತ್ರವನ್ನು ಲಗತ್ತಿಸತಕ್ಕದ್ದು.) | *5 ಅಂಕಗಳು* |
| 9. | **ಪಾಠೋಪಕರಣ, ಕಲಿಕಾ ಮತ್ತು ಆಟೋಪಕರಣ**<br>(ಅ) ರೂ. 10,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು ಇದ್ದಲ್ಲಿ . . . . . . . . . . . . .<br>(ಆ) ರೂ. 5,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು, ಆದರೆ ರೂ. 10,000/- ಕಡಿಮೆ ಇದ್ದಲ್ಲಿ . . . . . .<br>(ಇ) ರೂ. 5,000/- ಕ್ಕಿಂತ ಕಡಿಮೆ ಬೆಲೆಯ ಉಪಕರಣಗಳು . . . . | *(ಗರಿಷ್ಟ 5 ಅಂಕಗಳು)*<br>*5 ಅಂಕಗಳು*<br>ಸದರಿ *5 ಅಂಕಗಳ ಪೈಕಿ 2 ಅಂಕಗಳು*<br>*ಯಾವುದೇ ಅಂಕಗಳು ಇಲ್ಲ.* |
| 10. | **ಆಟದ ಮೈದಾನ**<br>(ಅ) ವಾಲಿಬಾಲ್ ಕೋರ್ಟಿನ ಎರಡು ಪಟ್ಟು ಅಥವಾ ಅದಕ್ಕಿಂತ ಹೆಚ್ಚಿನ ಅಳತೆಯ ಆಟದ ಮೈದಾನ ಇದ್ದಲ್ಲಿ . . . . . . . . . . . . . .<br>(ಆ) ಒಂದು ವಾಲಿಬಾಲ್ ಕೋರ್ಟಿನ ಅಳತೆಯಷ್ಟು ಆಟದ ಮೈದಾನ ಇದ್ದಲ್ಲಿ . . . . . . . . . . . . . . . . . . . . . . . . . . . . . . . .<br>(ಇ) (ಆ) ಗಿಂತ ಕಡಿಮೆ ಅಳತೆಯ ಆಟದ ಮೈದಾನ ಇದ್ದಲ್ಲಿ . . . .<br>ಆಟದ ಮೈದಾನದ ಭಾವಚಿತ್ರವನ್ನು ಲಗತ್ತಿಸತಕ್ಕದ್ದು. | (ಗರಿಷ್ಟ 5 ಅಂಕಗಳು)<br>*5 ಅಂಕಗಳು*<br>ಸದರಿ *5 ಅಂಕಗಳ ಪೈಕಿ 2 ಅಂಕಗಳು*<br>*ಯಾವುದೇ ಅಂಕಗಳು ಇಲ್ಲ* |
| | *ಒಟ್ಟು (ಗರಿಷ್ಟ)* | *100 ಅಂಕಗಳು* |

2. ದಿನಾಂಕ 12-4-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006ರ ಪ್ರಕಾರ ಖಾಲಿ ಹುದ್ದೆಗಳನ್ನು ತುಂಬಲು ಹಾಗೂ ಅದಕ್ಕೆ ಅನುದಾನ ಸಹಿತ ಅನುಮೋದನೆ ಪಡೆಯಲು ಅರ್ಹವಾಗಲು, ಸಂಬಂಧಿಸಿದ ಅನುದಾನಿತ ಖಾಸಗಿ ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜು, ಸದರಿ 100ಅಂಕ ಗಳ ಪೈಕಿ ಸರಾಸರಿ ಕನಿಷ್ಟ 60 ಅಂಕಗಳನ್ನು ಪಡೆಯತಕ್ಕದ್ದು.

(ಸಿದ್ದಲಿಂಗಯ್ಯ) 12/4

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ.

D.D.P.I. (31)

① D.D.P.I. Shimoga 20/4